# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 733 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 26.12.2022 |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಇಂಜಿನಿಯರಿಂಗ್ ವಿಭಾಗದ ಸುಮಾರು ಹತ್ತು ಸಾವಿರ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಸೀಟುಗಳು ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಯಾವ ಲೋಪದೋಷದಿಂದಾಗಿ ಈ ವಿದ್ಯಾರ್ಥಿಗಳು ಅತಂತ್ರಕ್ಕೆ ಸಿಲುಕಿದ್ದಾರೆ: | 2022ನೇ ಸಾಲಿನ ಇಂಜಿನಿಯರಿಂಗ್ ಸೀಟು ಹಂಚಿಕೆ ಪ್ರಕ್ರಿಯೆಗೆ ಸರ್ಕಾರವು 65,358 ಸೀಟುಗಳನ್ನು ಹಂಚಿಕೆ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಆದೇಶಿಸಿರುತ್ತದೆ. ಅದರಂತೆ ಸುಮಾರು 50,000 ಸೀಟುಗಳು ಅಭ್ಯರ್ಥಿಗಳಿಗೆ ಹಂಚಿಕೆ ಮಾಡಿದ್ದು, 14,282 ಸೀಟುಗಳು ಖಾಲಿ ಉಳಿದಿರುತ್ತದೆ. ಆದ್ದರಿಂದ ಹತ್ತು ಸಾವಿರ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಸೀಟುಗಳು ಸಿಗದೆ ಇರುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಆ) | ಕೌನ್ಸಿಲಿಂಗ್ ನಡೆಯುವಾಗ ಒಂದಷ್ಟು ವಿದ್ಯಾರ್ಥಿಗಳು ಇಂಜಿನಿಯರಿಂಗ್ ಸೀಟನ್ನು ಕಾಯ್ದಿರಿಸಿ, ಜೊತೆಗೆ ವೈದ್ಯಕೀಯ ಸೀಟು ಪ್ರವೇಶ ಕೌನ್ಸಿಲಿಂಗ್ ನಲ್ಲಿ ಪಾಲ್ಗೊಂಡಿದ್ದು, ಈ ವೇಳೆಯಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾದ ವಿದ್ಯಾರ್ಥಿಗಳು ಮೊದಲು ಕಾಯ್ದಿರಿಸಿದ ಇಂಜಿನಿಯರಿಂಗ್ ಸೀಟನ್ನು ಕೆಇಎ ತಂತಾನೇ ರದ್ದುಪಡಿಸಿರುವುದು ನಿಜವೇ: | ಅಭ್ಯರ್ಥಿಗಳ ಹಿತದೃಷ್ಟಿಯಿಂದ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಎರಡೂ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಲಾಗಿದೆ. ಆದರಂತೆ ಎರಡು ಸುತ್ತಿನ ವೈದ್ಯಕೀಯ ಸೀಟು ಹಂಚಿಕೆ ನಡೆಸಲಾಗಿರುತ್ತದೆ. ಎರಡನೇ ಸುತ್ತಿನಲ್ಲಿ ವೈದ್ಯಕೀಯ ಸೀಟು ಹಂಚಿಕೆಯಾದಲ್ಲಿ ಈ ಹಿಂದೆ ಹಂಚಿಕೆಯಾಗಿರುವ ಇಂಜಿನಿಯರಿಂಗ್ ಸೀಟು ನಿಯಮಾನುಸಾರ ತಂತಾನೆ ರದ್ದುಗೊಳ್ಳುತ್ತದೆ. ಈ ಬಗ್ಗೆ ಮಾಹಿತಿಯನ್ನು ಕೆಇಎ ವೆಬ್‌ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಚುರ ಪಡಿಸಲಾಗಿದೆ. ಎರಡನೇ ಸುತ್ತಿನಲ್ಲಿ ಇಂಜಿನಿಯರಿಂಗ್ ಸೀಟು ಪಡೆದುಕೊಂಡು ನಂತರ ವೈದ್ಯಕೀಯ ಸೀಟು ಪಡೆದ ಅಭ್ಯರ್ಥಿಗಳಿಗೆ ಈ ಹಿಂದೆ ಹಂಚಿಕೆಯಾಗಿರುವ ಇಂಜಿನಿಯರಿಂಗ್ ಸೀಟನ್ನು ರದ್ದುಗೊಳಿಸಿ ವೈದ್ಯಕೀಯ ಸೀಟಿಗೆ ಪ್ರವೇಶವನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಒಬ್ಬನೇ ಅಭ್ಯರ್ಥಿಯು ಎರಡು ಕೋರ್ಸುಗಳ ಸೀಟುಗಳನ್ನು ಪಡೆಯಲು ಅವಕಾಶ ಇರುವುದಿಲ್ಲ. ಈ ರೀತಿ ಸುಮಾರು 51 ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಇಂಜಿನಿಯರಿಂಗ್ ಸೀಟು ಪಡೆದುಕೊಂಡು ನಂತರ ವೈದ್ಯಕೀಯ ಸೀಟು ಪ್ರಕ್ರಿಯೆಯಲ್ಲಿ ಭಾಗವಹಿಸಿ ವೈದ್ಯಕೀಯ/ದಂತವೈದ್ಯಕೀಯ ಸೀಟನ್ನು ಪಡೆದುಕೊಂಡಿರುತ್ತಾರೆ. ಅಂತಹ ಅಭ್ಯರ್ಥಿಗಳ ಇಂಜಿನಿಯರಿಂಗ್ ಸೀಟನ್ನು ರದ್ದುಪಡಿಸಲಾಗಿರುತ್ತದೆ. |

| | | |
|---|---|---|
| ಇ) | ಹಾಗಿದ್ದಲ್ಲಿ, ಈಗ ವೈದ್ಯಕೀಯ ಸೀಟು ಪ್ರವೇಶಕ್ಕೆ ಇರುವ ದುಬಾರಿ ಶುಲ್ಕ ಪಾವತಿಸಲು ಸಾಧ್ಯವಾಗದೆ ಹಾಗೂ ತಮ್ಮ ಇಷ್ಟದ ವೈದ್ಯಕೀಯ ಕಾಲೇಜುಗಳು ಸಿಗದೆ ಸುಮಾರು ಹತ್ತು ಸಾವಿರದಷ್ಟು ವಿದ್ಯಾರ್ಥಿಗಳು ವಾಪಸ್ಸು ಇಂಜಿನಿಯರಿಂಗ್ ಸೀಟು ಪಡೆಯಲು ಸಾಧ್ಯವಾಗದೆ ಸಂಕಷ್ಟಕ್ಕೆ ಸಿಲುಕಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಸ್ಪಷ್ಟವಾದ ಮಾಹಿತಿಯನ್ನು ನೀಡುವುದು) | ಸೀಟು ಹಂಚಿಕೆ ಪ್ರಕ್ರಿಯೆಗೆ ಮುಂಚಿತವಾಗಿ ಕೆಇಎ ವೆಬ್‌ಸೈಟಿನಲ್ಲಿ ಕಾಲೇಜುವಾರು/ಕೋರ್ಸುವಾರು ಶುಲ್ಕದ ಮಾಹಿತಿಯನ್ನು ಪ್ರಕಟಿಸಲಾಗಿರುತ್ತದೆ. ಅಭ್ಯರ್ಥಿಯು ತಾನು ಪಡೆಯಲು ಇಚ್ಛಿಸಿರುವ ಸೀಟನ್ನು ಮಾತ್ರ ಅವರ ಇಚ್ಛೆಯಲ್ಲಿ ನಮೂದಿಸಬೇಕು. ದುಬಾರಿ ಶುಲ್ಕ ವೈದ್ಯಕೀಯ ಸೀಟನ್ನು ಅಭ್ಯರ್ಥಿಯು ಒಂದು ವೇಳೆ ಸ್ವಇಚ್ಛೆಯಿಂದ ಆಪ್ಷನ್ ಎಂಟ್ರಿ ಮಾಡುವಾಗ ನಮೂದಿಸಿದ್ದರೆ, ಅಭ್ಯರ್ಥಿಗಳು ಗಳಿಸಿರುವ ಮೆರಿಟ್ ಆಧಾರದ ಮೇಲೆ ಹಾಗೂ ಆಪ್ಷನ್ ಎಂಟ್ರಿಯಲ್ಲಿ ನಮೂದಿಸಿರುವ ಸೀಟುಗಳನ್ನು ಪರಿಗಣಿಸಿ ಸೀಟು ಹಂಚಿಕೆಯನ್ನು ತಂತ್ರಾಂಶದ ಮೂಲಕ ಮಾಡಲಾಗುತ್ತದೆ. ಒಂದು ವೇಳೆ ದುಬಾರಿ ಶುಲ್ಕವಿರುವ ವೈದ್ಯಕೀಯ ಸೀಟು ಅಭ್ಯರ್ಥಿಗೆ ಹಂಚಿಕೆಯಾದಲ್ಲಿ ಅವರೇ ಅದಕ್ಕೆ ನೇರ ಹೊಣೆಗಾರರಾಗುತ್ತಾರೆ.<br><br>ಈ ರೀತಿಯ ದುಬಾರಿ ಶುಲ್ಕದ ವೈದ್ಯಕೀಯ ಸೀಟನ್ನು ಆಪ್ಷನ್ ಎಂಟ್ರಿಯಲ್ಲಿ ನಮೂದು ಮಾಡಿದ ಕಾರಣ ಅದೇ ಸೀಟುಗಳು ಹಂಚಿಕೆಯಾಗಿ ನಂತರ ಆ ಸೀಟನ್ನು ರದ್ದುಗೊಳಿಸಿ ಈ ಹಿಂದೆ ಹಂಚಿಕೆಯಾಗಿರುವ ಇಂಜಿನಿಯರಿಂಗ್ ಸೀಟಿಗೆ ಪ್ರವೇಶ ನೀಡುವಂತೆ ಕೋರಿದ್ದ ಸುಮಾರು 51 ಅಭ್ಯರ್ಥಿಗಳಿರುತ್ತಾರೆ. ಅವರುಗಳಿಗೆ ಇಂಜಿನಿಯರಿಂಗ್ ಎರಡನೇ ಮುಂದುವರೆದ ಸುತ್ತಿನ ನಂತರ ಉಳಿದಿರುವ ಸೀಟುಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಅದರಲ್ಲಿ ಸುಮಾರು 41 ಅಭ್ಯರ್ಥಿಗಳು ಕಾಲೇಜಿಗೆ ವರದಿ ಮಾಡಿಕೊಂಡಿರುತ್ತಾರೆ. ಉಳಿದ 10 ಅಭ್ಯರ್ಥಿಗಳು ಬೇರೆ ಕೋರ್ಸುಗಳಿಗೆ ಪ್ರವೇಶ ಪಡೆದಿರುವುದಾಗಿ ಹಾಗೂ ಈಗಾಗಲೇ ಹಂಚಿಕೆಯಾಗಿರುವ ಇಂಜಿನಿಯರಿಂಗ್ ಸೀಟಿನಲ್ಲಿ ಆಸಕ್ತಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. |

**ಇಡಿ 346 ಟಿಇಸಿ 2022**

**(ಡಾ|| ಅಶ್ವತ್ಥನಾರಾಯಣ್.ಸಿ.ಎನ್)**

ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಹಾಗೂ ಜೀವನೋಪಾಯ ಇಲಾಖೆ ಸಚಿವರು